ಇನ್ನೂ ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಲ್ಲಿದೆ ಎನ್ನುವ ಮಾತು ಹೇಳುತ್ತಾರೆ. ಆ ಬಗ್ಗೆ ಭರವಸೆ ಕೊಟ್ಟಿದ್ದಾರೆ, ಆದರೆ, ಇನ್ನೂ ಅನುದಾನ ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದಾರೆ. ಸರ್ಕಾರ ಆದಷ್ಟು ಬೇಗ ಆ ಅನುದಾನ ಬಿಡುಗಡೆ ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ: (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋದ್ಧ ಪಕ್ಷದ ನಾಯಕರು ಪ್ರಸ್ತಾಪಿಸಿರುವ ವಿಷಯವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖಾ ವ್ಯಾಪ್ತಿಗೆ ಬರುತ್ತದೆ. ಸಂಬಂಧಪಟ್ಟ ಸಚಿವರು Council ನಲ್ಲಿದ್ದಾರೆ. ಏನಿದೆ ಎಂದು ವಿಚಾರ ಮಾಡಿ ಉತ್ತರ ಕೊಡುತ್ತಾರೆ.

6) ವಿಷಯ: ವೇತನಾನುದಾನದ ಬಗ್ಗೆ

ಶ್ರೀ ಪಿ. ರಾಜೀವ್ (ಕುಡಚಿ): ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದ ಮೊರಬಾ ಗ್ರಾಮದಲ್ಲಿರುವ ಸಿದ್ದೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿರುವ ಅಜಿತ್ ಕುಮಾರ್ ಎಸ್ ಬಾನೆ ಕನ್ನಡ ಮಾಧ್ಯಮಿಕ ಪ್ರಾಥಮಿಕ ಶಾಲೆ, ಇದಕ್ಕೆ ದಿನಾಂಕ: 14-03-2013 ರಂದು ವೇತನಾನುದಾನಕ್ಕೆ ಆದೇಶವಾಗಿದೆ. ಆದರೆ, ಆ ಶಿಕ್ಷಣ ಸಂಸ್ಥೆಯ ಆಂತರಿಕ ವ್ಯಾಜ್ಯಗಳಿಂದ ಶಿಕ್ಷಕರನ್ನು ಇವತ್ತಿನವರಗೆ ವೇತನಾನುದಾನಕ್ಕೆ ಒಳಪಡಿಸಲಿಕ್ಕೆ ಆಗಿಲ್ಲ. ಇದರ ಸಲುವಾಗಿ ಶಿಕ್ಷಕರು Writ Petition ಹಾಕಿದರು.

ಅಧ್ಯಕ್ಷರು: ಈಗ ಏನಾಗಬೇಕು ಹೇಳಿ.

ಶ್ರೀ ಪಿ. ರಾಜೀವ್: ಅವರಿಗೆ ವೇತನಾನುದಾನವನ್ನು ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಇದೂ ಕೂಡ ಅಷ್ಟೆ. ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತೇನೆ.

7) ವಿಷಯ: ಮಂಡ್ಯ MUDA ಹಗರಣ ಬಗ್ಗೆ

ಅಧ್ಯಕ್ಷರು: ಮಾನ್ಯ ಚಲುವರಾಯಸ್ವಾಮಿಯವರೆ, ನೀವು ಆಗಲೇ ಪ್ರಸ್ತಾಪಿಸಿದ್ದೀರಲ್ಲ. ಮತ್ತೇಕೆ ಇದೇ ವಿಷಯ ಬಂತು?

ಶ್ರೀ ಎನ್. ಚಲುವರಾಯಸ್ವಾಮಿ: ಇಲ್ಲ ಸಾರ್.

ಅಧ್ಯಕ್ಷರು: ಎಷ್ಟು ಸಲ ಒಂದೇ ಚಿಷಯವನ್ನು ಕೇಳುವುದು?